**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆಃ 299/2024**

**ಪಿರ್ಯಾದಿದಾರರುಃ** ರಾಜ್ಯ ಪರ ಪೊಲೀಸರು,
ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣೆ

**ವಿರುದ್ದ**

**ಆರೋಪಿಃ** **ಪುಷ್ಪ**,
ಕೋಂ ಪ್ರಕಾಶ,
46 ವರ್ಷ ವಯಸ್ಸು,
ವಾಸಃ ದೊಡ್ಡಗನ್ನಿ ಗ್ರಾಮ,
ಶ್ರೀನಿವಾಸಪುರ ಗ್ರಾಮ, ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು, ಹಾಸನ.

**ದೋಷಾರೋಪಣೆ**

**ಶ್ರೀಮತಿ ಕುಸುಮ ವಿ.,** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಚನ್ನರಾಯಪಟ್ಟಣ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕ 13.12.2023 ರಂದು ಬೆಳಗ್ಗೆ 10.00 ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ಅಬಕಾರಿ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ, ಶ್ರೀನಿವಾಸಪುರ ಗ್ರಾಮದ ನ್ಯೂ ತಿರುಮಲ ವೈನ್ಸ್ ಪಕ್ಕದ ಚಿಲ್ಲರೆ ಅಂಗಡಿಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯಾದ ನೀವು ಯಾವುದೇ ಪರವಾನಿಗೆ ಇಲ್ಲದೆ ಒಂದು ಬಿಳಿ ಪ್ಲಾಸ್ಟಿಕ್ ಕವರ್ ನಲ್ಲಿ 90 ಎಂ.ಎಲ್ ನ ಮದ್ಯ ತುಂಬದ original coice deluxe whisky ಯ 30 ಟೆಟ್ರಾ ಪ್ಯಾಕೇಟ್ ಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು, ಆ ಮೂಲಕ ಆರೋಪಿತರಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಎರಡನೆಯದಾಗಿ, ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲೆ ಹೇಳಿದ ಮದ್ಯದ ಬಾಟಲಿಗಳನ್ನು ಇಟ್ಟುಕೊಂಡು ಯಾವುದೇ ಪರವಾನಿಗೆ ಇಲ್ಲದ ಇರುವುದು ಗೊತ್ತಿದ್ದರೂ ಸಹ ಅವುಗಳನ್ನು ಅಕ್ರಮವಾಗಿ ದಾಸ್ತಾನು ಹೊಂದಿದ್ದು, ಆ ಮೂಲಕ ಆರೋಪಿತರಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

**ಪ್ರಶ್ನೆ:** 1. ಈಗ ನಿಮಗೆ ಓದಿ ಹೇಳಲಾದ ನಿಮ್ಮ ಮೇಲಿನ ದೋಷಾರೋಪಣೆ ನಿಮಗೆ ತಿಳಿಯಿತೆ?

ಆರೋಪಿಯ ಉತ್ತರಃ

**ಪ್ರಶ್ನೆ:** 2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ನಡೆಯಲೆಂದು ಬಯಸುತ್ತೀರಾ?

ಆರೋಪಿಯ ಉತ್ತರಃ

(ಈ ದೋಷರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿ/ಗಳಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಆರೋಪಿ/ಗಳು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು ಅವು ಸರಿ ಇವೆ ಎಂದು ದೃಢೀಕರಿಸಲಾಯಿತು)

ದಿನಾಂಕಃ **17.07.2025**

(ಶ್ರೀಮತಿ ಕುಸುಮ ವಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.